## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 663

ಸದಸ್ಯರ ಹೆಸರು : ಶ್ರೀ ಡಾ|| ಚಂದ್ರಶೇಖರ ಬಸವರಾಜ್ ಪಾಟೀಲ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 12-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಚ್ಚುವರಿ ಬಸ್ ಘಟಕಗಳ ಸ್ಥಾಪನೆಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; | ಹೌದು. ಪ್ರಸ್ತಾವನೆ ಇದೆ.<br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ನಿವೇಶನ ಲಭ್ಯತೆ, ಅನುದಾನದ ಲಭ್ಯತೆ ಹಾಗೂ ಆದ್ಯತೆ ಅನುಸಾರ ಕ್ರಮವಹಿಸ ಬೇಕಿರುವುದರಿಂದ ಬಸ್ ಘಟಕಗಳ ಸ್ಥಾಪನೆಗೆ ಸ್ವಲ್ಪ ವಿಳಂಬವಾಗುತ್ತಿದೆ. |
| ಆ. | ಇದ್ದಲ್ಲಿ, ಬಸ್ ಘಟಕಗಳ ಸ್ಥಾಪನೆಗೆ ಸರ್ಕಾರವು ಏಕೆ ವಿಳಂಬ ನೀತಿ ಅನುಸರಿಸುತ್ತಿದೆ; | |
| ಇ. | ಕಲಬುರಗಿ, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ಬಸ್ ಘಟಕ ಸ್ಥಾಪನೆ ಮಾಡದಿರಲು ಕಾರಣವೇನು? | ಕಲಬುರಗಿ, ಬೀದರ, ಯಾದಗಿರಿ ಜಿಲ್ಲೆಗಳಲ್ಲಿ ಈಗಾಗಲೇ ಅವಶ್ಯಕತೆಗೆ ತಕ್ಕಂತೆ ಬಸ್ ಘಟಕಗಳನ್ನು ನಿರ್ಮಿಸಲಾಗಿರುತ್ತದೆ.<br>ಕೆಲವು ತಾಲ್ಲೂಕು ಕೇಂದ್ರಗಳಾದ ಯಡ್ರಾಮಿ, ಹುಣಸಗಿ, ಕಮಲಾಪೂರ ಹಾಗೂ ಹುಲಸೂರುಗಳಲ್ಲಿ ಬಸ್ ಘಟಕ ನಿರ್ಮಿಸಲು ನಿವೇಶನ ಲಭ್ಯವಾಗದಿರುವುರಿಂದ ಬಸ್ ಘಟಕ ನಿರ್ಮಿಸಲು ವಿಳಂಬವಾಗಿರುತ್ತದೆ. ಮುಂದಿನ ದಿನಗಳಲ್ಲಿ ನಿವೇಶನ ಲಭ್ಯವಾದ ನಂತರ ಅವಶ್ಯಕತೆಗನುಗುಣವಾಗಿ ಆದ್ಯತೆಯ ಮೇರೆಗೆ ಬಸ್ ಘಟಕ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 44 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು